ಭಾ.ಕೃ.ಅನು.ಪ – ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ
ಹೆಸರಘಟ್ಟ ಕೆರೆ ಅಂಚೆ, ಬೆಂಗಳೂರು–560089.

भा.कृ.अनु.प–भारतीय बागवानी अनुसंधान संस्थान
हेसरघट्टा लेक पोस्ट, बेंगलूरु – 560089

**ICAR-Indian Institute of Horticultural Research**
**Hesaraghatta Lake Post, Bengaluru - 560089**



# ರಾಷ್ಟ್ರೀಯ ತೋಟಗಾರಿಕಾ ಮೇಳ

ಗ್ರಾಮೀಣ ಸಮೃದ್ಧಿಗಾಗಿ ತೋಟಗಾರಿಕೆ

# राष्ट्रीय बागवानी मेला

ग्रामीण समृद्धि को बढ़ावा देने के लिए बागवानी

## Jan 23-25, 2019

# National Horticultural Fair - 2019

*Horticulture for Promoting Rural Prosperity*



ಸ್ಥಳ: ಐ.ಸಿ.ಎ.ಆರ್ – ಐ.ಐ.ಎಚ್.ಆರ್ ಆವರಣ, ಹೆಸರಘಟ್ಟ–560089
स्थान : भा.कृ.अनु.प. – भा.बा.अनु.सं., हेसरघट्टा, बेंगलूरु – 560089
**Venue : ICAR-IIHR, Hesaraghatta, Bengaluru-560089**

## ರಾಷ್ಟ್ರೀಯ ತೋಟಗಾರಿಕಾ ಮೇಳ-2019

ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯು (ಐ.ಐ.ಎಚ್.ಆರ್) ಕೇಂದ್ರ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯಕ್ಕೆ ಸಂಬಂಧಿಸಿದ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ಅಡಿಯಲ್ಲಿ 1967 ರಲ್ಲಿ ಸ್ಥಾಪಿತವಾಗಿದೆ. ಇದು ಬೆಂಗಳೂರು ಹೊರವಲಯದ ಹೆಸರಘಟ್ಟದಲ್ಲಿದೆ. ವಿವಿಧ ಹಣ್ಣಿನ ಬೆಳೆ, ತರಕಾರಿ ಬೆಳೆಗಳು, ಅಲಂಕಾರಿಕ ಹಾಗೂ ಔಷಧೀಯ ಬೆಳೆಗಳು ಮತ್ತು ಅಣಬೆಗೆ ಸಂಬಂಧಿಸಿದ ಮೂಲ ಹಾಗೂ ಸಮಗ್ರ ಸಂಶೋಧನೆಗಳನ್ನು ನಿರಂತರವಾಗಿ ಇಲ್ಲಿ ನಡೆಸಲಾಗುತ್ತಿದೆ. ಇಲ್ಲಿ ಬಿಡುಗಡೆಯಾಗಿರುವ ರೋಗ ಮತ್ತು ಕೀಟ ನಿರೋಧಕ ಶಕ್ತಿಯುಳ್ಳ ಪ್ರಮುಖ ತಳಗಳು, ರೈತ ಸ್ನೇಹಿ ಲಾಭದಾಯಕ ತಂತ್ರಜ್ಞಾನಗಳು, ಪರಿಸರ ಸ್ನೇಹಿ ಹಾಗು ಬರ ಸಹಿಷ್ಣುತೆಯ ಮಾರ್ಗ, ಕೊಯ್ಲೋತ್ತರ ಮತ್ತು ಮೌಲ್ಯವರ್ಧನೆಯ ತಂತ್ರಜ್ಞಾನಗಳು, ಮಣ್ಣು ಮತ್ತು ಆರೋಗ್ಯ ವಿಜ್ಞಾನ ಹಾಗೂ ಪೋಷಕಾಂಶಗಳ ಮಿಶ್ರಣಗಳು, ದುಂಡಾಣು ನಿಯಂತ್ರಣದ ಜೈವಿಕ ಕ್ರಮಗಳು, ಗುಣಮಟ್ಟದ ಬೀಜ ಮತ್ತು ಸಸ್ಯಗಳ ಪೂರೈಕೆ ಹಾಗೂ ಇತ್ಯಾದಿ ತಂತ್ರಜ್ಞಾನಗಳನ್ನು ಪ್ರತಿಯೊಬ್ಬರಿಗೂ ದೊರಕಿಸಿಕೊಡುವಲ್ಲಿ ಸಂಸ್ಥೆಯು ಪ್ರಮುಖ ಪಾತ್ರವಹಿಸಿದೆ. ಇಲ್ಲಿ 263 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಸಂಶೋಧನೆ ಹಾಗೂ ಪ್ರಾತ್ಯಕ್ಷಿತೆಗಳನ್ನು ನಡೆಸಲಾಗುತ್ತಿದೆ. ಈ ಸಂಸ್ಥೆಯ ವ್ಯವಹಾರ ಯೋಜನೆ ಅಭಿವೃದ್ಧಿ ಘಟಕ (BPD), ಸಂಸ್ಥೆಯಲ್ಲಿ ನಡೆಯುವ ತರಬೇತಿಗಳು, ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದ (ATIC) ಪ್ರಕಟಣೆಗಳು ಹಾಗೂ ಪರಿಕರಗಳ ಮಾರಾಟ, ತೋಟಗಾರಿಕಾ ಮಾಹಿತಿ ಒದಗಿಸುವ ತ್ವರಿತ ಗತಿಯ ಕ್ರಮಗಳು ರೈತರಿಗೆ ಉಪಯುಕ್ತವಾಗಿವೆ.

## ರಾಷ್ಟ್ರೀಯ ತೋಟಗಾರಿಕಾ ಮೇಳ ಕುರಿತು

ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐ.ಐ.ಎಚ್.ಆರ್), ಹೆಸರಘಟ್ಟ, ಬೆಂಗಳೂರಿನಲ್ಲಿ 2019 ರ ಜನವರಿ 23 ರಿಂದ 25 ರವರೆಗೆ 3 ದಿನಗಳ "ರಾಷ್ಟ್ರೀಯ ತೋಟಗಾರಿಕಾ ಮೇಳ"ವನ್ನು ಹಮ್ಮಿಕೊಳ್ಳಲಾಗಿದೆ. ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯು, ಈ ಮೇಳವನ್ನು ಸೊಸೈಟಿ ಫಾರ್ ಪ್ರೋಮೋಷನ್ ಆಫ್ ಹಾರ್ಟಿಕಲ್ಚರ್, ಬೆಂಗಳೂರು; ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು; ರಾಷ್ಟ್ರೀಯ ತೋಟಗಾರಿಕೆ ಮಂಡಳಿ, ಗುರುಗ್ರಾಮ ಮತ್ತು ತೆಂಗು ಅಭಿವೃದ್ಧಿ ಮಂಡಳಿ (ಸಿ.ಡಿ.ಬಿ), ಕಲ್ಲಿಕೋಟೆ ಇವರುಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ.

## ಈ ಮೇಳದ ಮೂರು ದಿನಗಳ ಕಾರ್ಯಕ್ರಮಗಳ ಉದ್ದೇಶಗಳು

1. ಹೊಸ ತೋಟಗಾರಿಕೆ ತಂತ್ರಜ್ಞಾನಗಳನ್ನು ಪ್ರದರ್ಶಿಸುವುದು.
2. ಕೃಷಿ ಸಮುದಾಯಗಳೊಂದಿಗೆ ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ವಿವಿಧ ಸಂಸ್ಥೆಗಳು, ರಾಜ್ಯದ ಕೃಷಿ ವಿಶ್ವವಿದ್ಯಾಲಯ, ಅಭಿವೃದ್ಧಿ ಇಲಾಖೆಗಳು, ಖಾಸಗಿ ಉದ್ಯಮಗಳು, ಹಣಕಾಸು ಸಂಸ್ಥೆ, ಸರ್ಕಾರೇತರ ಸಂಸ್ಥೆ, ರೈತ ಉತ್ಪಾದಕರ ಸಂಘ (ಎಫ್.ಪಿ.ಓ) ಮತ್ತು ಮಾರುಕಟ್ಟೆ ಕಾರ್ಯಕಾರಿ ಸಂಸ್ಥೆಗಳನ್ನು ವಿಚಾರ ವಿನಿಮಯಕ್ಕೆ ಸಾಮಾನ್ಯ ವೇದಿಕೆಯಲ್ಲಿ ಒಗ್ಗೂಡಿಸುವುದು.
3. ತೋಟಗಾರಿಕೆ ತಂತ್ರಜ್ಞಾನಗಳ ಪ್ರಸರಣಕ್ಕಾಗಿ ವಿಜ್ಞಾನಿಗಳೊಂದಿಗೆ, ರೈತರ ಹಾಗೂ ವಾರಸುದಾರರ ಸಂವಾದ.

## ರಾಷ್ಟ್ರೀಯ ತೋಟಗಾರಿಕೆ ಮೇಳದ ಪ್ರಮುಖ ಕಾರ್ಯಚಟುವಟಿಕೆಗಳು

1. ಸುಧಾರಿತ ತಳಿಗಳ ಮತ್ತು ತಂತ್ರಜ್ಞಾನಗಳ ಪ್ರಾತ್ಯಕ್ಷಿತೆ ಪ್ರದರ್ಶನ.
2. ಭಾರತೀಯ ಕೃಷಿ ಅನುಸಂಧಾನ ಪರಿಷತ್ತಿನ ವಿವಿಧ ಸಂಸ್ಥೆಗಳು, ಕೃಷಿ ವಿಶ್ವವಿದ್ಯಾಲಯ, ಅಭಿವೃದ್ಧಿ ಇಲಾಖೆ, ಸರ್ಕಾರೇತರ ಸಂಸ್ಥೆ ಮತ್ತು ಖಾಸಗಿ ಕೈಗಾರಿಕಾ ಸಂಸ್ಥೆಗಳಿಂದ ವಸ್ತು ಪ್ರದರ್ಶನ.
3. ವಿವಿಧ ತೋಟಗಾರಿಕಾ ಪ್ರಗತಿಯ ಮಾಹಿತಿಗಾಗಿ ಕೃಷಿಕರು, ವಿಜ್ಞಾನಿಗಳು ಮತ್ತು ಸಂಬಂಧಿಸಿದವರೊಂದಿಗೆ ನಿರಂತರ ಸಂವಾದಗಳು.
4. ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ ಮತ್ತು ಖಾಸಗಿ ಉದ್ಯಮದಾರರಿಂದ, ಉತ್ತಮ ಗುಣಮಟ್ಟದ ವಿವಿಧ ತಳಿಯ ಸಸ್ಯ, ಬೀಜಗಳ ಮತ್ತು ಪರಿಕರಗಳ ಮಾರಾಟ.
5. ಪ್ರಗತಿಪರ ರೈತರ ನವೀನ ತಂತ್ರಜ್ಞಾನವನ್ನು ಗುರುತಿಸಿ ಸನ್ಮಾನಿಸುವುದು.

## ತೋಟಗಾರಿಕೆ ಮೇಳದಲ್ಲಿನ ಪ್ರಮುಖ ವಿಷಯಗಳು

- ❖ ಹಣ್ಣು, ತರಕಾರಿ, ಅಲಂಕಾರಿಕ, ಔಷಧಿ, ಸುಗಂಧದ್ರವ್ಯ, ಪ್ಲಾಂಟೇಷನ್, ಸಾಂಬಾರು ಬೆಳೆಗಳು ಮತ್ತು ಅಣಬೆ ಬೆಳೆಗಳಿಗೆ ಸಂಬಂಧಿತ ಉತ್ಪಾದನೆ ಮತ್ತು ರಕ್ಷಣೆ ತಂತ್ರಜ್ಞಾನಗಳನ್ನು ಪ್ರದರ್ಶನ ಮಾಡಲಾಗುವುದು.
- ❖ ನರ್ಸರಿ ಸಸ್ಯಗಳನ್ನು ಪೂರೈಸುವುದು.
- ❖ ಸಂರಕ್ಷಿತ ತೋಟಗಾರಿಕೆ ವ್ಯವಸಾಯ.
- ❖ ತೋಟಗಾರಿಕೆ ಆಧಾರಿತ ಮಿಶ್ರ ಕೃಷಿ ಪದ್ಧತಿ.
- ❖ ಕೊಯ್ಲೋತ್ತರ ತಂತ್ರಜ್ಞಾನ ಮತ್ತು ಮೌಲ್ಯವರ್ಧನೆ.
- ❖ ತೋಟಗಾರಿಕೆಯಲ್ಲಿ ಯಂತ್ರೀಕರಣ.

**ವಸ್ತು ಪ್ರದರ್ಶನದ ಆಕರ್ಷಣೆ ಮತ್ತು ಮಾರಾಟ ವ್ಯವಸ್ಥೆ**

- ಬೀಜಗಳು ಮತ್ತು ನರ್ಸರಿ ಸಸ್ಯಗಳು
- ATIC ಸೌಲಭ್ಯಗಳು ಮತ್ತು ಉತ್ಪನ್ನಗಳು
- ನೀರಾವರಿ ವಿಧಾನಗಳು
- ಆಹಾರ ಸಂಸ್ಕರಣೆ ಮತ್ತು ಪ್ಯಾಕಿಂಗ್
- ಹಸಿರುಮನೆ, ನೆರಳು ಮನೆ ಒಳಗೊಂಡ ನಿಖರ ಕೃಷಿ ವಿಧಾನಗಳು
- ಅಲಂಕಾರಿಕ ಮತ್ತು ಔಷಧೀಯ ಬೆಳೆಗಳು
- ಸಾವಯವ ಕೃಷಿ ಹಾಗೂ ಸಮಗ್ರ ಬೇಸಾಯ ಪದ್ಧತಿಗಳು
- ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ರಫ್ತು ಸೇವೆಗಳು
- ತೋಟಗಾರಿಕಾ ಸಂಶೋಧನೆಗಳು ಹಾಗೂ ಅಭಿವೃದ್ಧಿ
- ಮಾರುಕಟ್ಟೆ ಸೇವೆಯಲ್ಲಿ ತೊಡಗಿರುವವರು.
- ಸಸ್ಯ ಪೋಷಕಾಂಶಗಳು ಮತ್ತು ಸಸ್ಯ ಬೆಳವಣಿಗೆ ಉತ್ತೇಜಕಗಳು.
- ಸಸ್ಯ ಔಷಧಿಗಳು ಹಾಗೂ ಕೀಟ–ರೋಗ ನಿವಾರಕಗಳು
- ಅಂಗಾಂಶ ಕೃಷಿ ಮಾದರಿಗಳು ಮತ್ತು ಸಸ್ಯಗಳು
- ತೋಟಗಾರಿಕಾ ಉಪಕರಣಗಳು ಹಾಗೂ ತಯಾರಿಕ ಕಂಪನಿಗಳು
- ಆರ್ಥಿಕ ವಲಯದ ಸಂಸ್ಥೆಗಳು
- ಸರ್ಕಾರಿ, ಅರೆ–ಸರ್ಕಾರಿ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು
- ಸ್ತ್ರೀಶಕ್ತಿ ಹಾಗು ಇತರೆ ಸ್ವ–ಸಹಾಯ ಗುಂಪುಗಳು
- ವ್ಯವಹಾರ ಪರವಾನಿಗಿದಾರರು ಹಾಗು ತಂತ್ರಜ್ಞಾನ ವ್ಯವಹಾರ ಯೋಜನೆ
- ರೈತಾಸಕ್ತ ಗುಂಪುಗಳು ಹಾಗು ರೈತರ ಉತ್ಪಾದಕ ಕಂಪೆನಿಗಳು
- ಪರಂಪರಾಗತ ಸ್ಥಳೀಯ ತಂತ್ರಜ್ಞಾನಗಳು..... ಇತರೆ.

**ವಸ್ತು ಪ್ರದರ್ಶನ ಮಳಿಗೆಗಳು**

ರಾಷ್ಟ್ರೀಯ ತೋಟಗಾರಿಕಾ ಮೇಳವು ಸುಮಾರು 130 ಮಳಿಗೆಗಳನ್ನು ಒಳಗೊಂಡಿದ್ದು 10ಅಡಿ x 10ಅಡಿ ಅಳತೆಯ ಹೈ–ಟೆಕ್ ಮಳಿಗೆಗೆ ರೂ.10,000/– +18% ಜಿ.ಎಸ್.ಟಿ (ಮೂರು ದಿನಗಳಿಗೆ) ಶುಲ್ಕವಿರುತ್ತದೆ. ಭಾಗವಹಿಸಲಿಚ್ಛಿಸುವವರು ನಿಗಧಿ ಅರ್ಜಿಯೊಂದಿಗೆ (ಲಗತ್ತಿಸಿರುವ) ಹಣವನ್ನು ಮುಂಗಡವಾಗಿ ಪಾವತಿಸಿ ಡಿಸೆಂಬರ್ 20, 2018ರ ಒಳಗೆ ನೋಂದಣಿ ಮಾಡಿಸಬಹುದಾಗಿದೆ. ನರ್ಸರಿ ಮತ್ತು ಯಂತ್ರೋಪಕರಣಗಳ ಪ್ರದರ್ಶನವನ್ನು 10ಅಡಿ x 20ಅಡಿ ಅಳತೆಯ ಶಾಮಿಯಾನದ ಕೆಳಗೆ ಒದಗಿಸಲಾಗುವುದು. ಈ ಎಲ್ಲಾ ಮಳಿಗೆಗಳನ್ನ ಮುಂಗಡವಾಗಿ ಕಾಯ್ದಿರಿಸಲು **ಡಾ. ಟಿ. ಎಸ್. ಅಘೋರ, ಪ್ರಧಾನ ವಿಜ್ಞಾನಿ, ತರಕಾರಿ ಬೆಳೆಗಳ ವಿಭಾಗ, ಐಸಿಎಆರ್–ಐಐಎಚ್ಆರ್ ಸಂಸ್ಥೆ, ಹೆಸರಘಟ್ಟ, ಬೆಂಗಳೂರು–560089.** ಇ–ಮೇಲ್–Aghora.TS@icar.gov.in; tsaghor@gmail.com ದೂ. : +91–9986100079 ಇವರನ್ನು ಸಂಪರ್ಕಿಸಬಹುದಾಗಿದೆ.

**ಪ್ರಕಟಣೆಗಳು**

ಈ ಮೇಳದಲ್ಲಿ ತೋಟಗಾರಿಕೆಗೆ ಸಂಬಂಧಪಟ್ಟ ಕಂಪನಿಗಳ ವಿಳಾಸವನ್ನು ಹೊಂದಿರುವ ಕೈಪಿಡಿಯನ್ನು ಹೊರ ತರಲಾಗುವುದು. ಆಸಕ್ತರು ಈ ಕೆಳಗಿನಂತೆ ತಮ್ಮ ಪುಟಗಳನ್ನು ಕಾಯ್ದಿರಿಸಬಹುದು.

1. ಹಿಂದಿನ ಕವರ್, ಹೊರಗಿನ ಪುಟ (ಬಣ್ಣದ್ದು) – ರೂ. 1.00 ಲಕ್ಷ
2. ಹಿಂದಿನ ಕವರ್, ಒಳಗಿನ ಪುಟ (ಬಣ್ಣದ್ದು) – ರೂ. 0.50 ಲಕ್ಷ
3. ಒಳಗಿನ ಪೂರ್ಣ ಪುಟ (ಬಣ್ಣದ್ದು) – ರೂ. 0.25 ಲಕ್ಷ
4. ಒಳಗಿನ ಅರ್ಧ ಪುಟ (ಬಣ್ಣದ್ದು) – ರೂ. 0.15 ಲಕ್ಷ

ಕೈಪಿಡಿಯಲ್ಲಿ ಜಾಹಿರಾತು ಪ್ರಕಟಿಸಲು ಇಚ್ಛಿಸುವವರು **ಡಾ. ಸಿ. ಅಶ್ವತ್ಥ್, ಪ್ರಧಾನ ವಿಜ್ಞಾನಿ, ಐ.ಸಿ.ಎ.ಆರ್ – ಐ.ಐ.ಎಚ್.ಆರ್, ಹೆಸರಘಟ್ಟ, ಬೆಂಗಳೂರು–560089** ಇವರನ್ನು ಸಂಪರ್ಕಿಸಬಹುದಾಗಿದೆ. ಇವರ ಇ–ಮೇಲ್ ವಿಳಾಸ – Aswath.C@icar.gov.in; aswathiihr@gmail.com ಮತ್ತು ದೂರವಾಣಿ ಸಂಖ್ಯೆ : +91–9902522229.

**ಪ್ರಾಯೋಜಕತ್ವ**

ಈ ರಾಷ್ಟ್ರೀಯ ತೋಟಗಾರಿಕಾ ಮೇಳದ ಪ್ರಾಯೋಜಕತ್ವಕ್ಕಾಗಿ ಸರ್ಕಾರಿ–ಇಲಾಖೆ, ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಕಂಪನಿ ಹಾಗೂ ಇತರರು ಈ ಕೆಳಕಂಡ ಪ್ರಾಯೋಜಕತ್ವ ಪಡೆಯಬಹುದು.

1. ಪ್ಲಾಟಿನಂ : 3 ಲಕ್ಷ ರೂಪಾಯಿಗಳು
2. ಗೋಲ್ಡ್ : 2 ಲಕ್ಷ ರೂಪಾಯಿಗಳು
3. ರಜತ (ಬೆಳ್ಳಿ) : 1 ಲಕ್ಷ ರೂಪಾಯಿಗಳು

**ಪ್ರತಿ ಪ್ರಾಯೋಜಕರಿಗೆ ದೊರೆಯುವ ಸೌಲಭ್ಯಗಳು**

❖ ಪ್ಲಾಟಿನಮ್ ಮತ್ತು ಗೋಲ್ಡ್ ಪ್ರಾಯೋಜಕರಿಗೆ, ಎರಡು (2) 10ಅಡಿ X 10ಅಡಿ ಅಳತೆಯ ಹೈ–ಟೆಕ್ ಮಳಿಗೆಗಳನ್ನು ಉಚಿತವಾಗಿ ನೀಡಲಾಗುವುದು ಮತ್ತು ಪ್ರಾಯೋಜಕರ ಹೆಸರು/ಸಂಸ್ಥೆಯ ಚಿಹ್ನೆಯನ್ನು ಮೇಳದ ಪ್ರಮುಖ ಸ್ಥಳಗಳಲ್ಲಿ ಹಾಗು ತೋಟಗಾರಿಕೆ ವಿಶೇಷ ಕೈಪಿಡಿ ಸಂಚಿಕೆಯಲ್ಲೂ ಪ್ರಕಟಿಸಲಾಗುವುದು.

❖ ಬೆಳ್ಳಿ ಪ್ರಾಯೋಜಕರಿಗೆ, ಒಂದು (1) 10ಅಡಿ X 10ಅಡಿ ಅಳತೆಯ ಮಳಿಗೆಯನ್ನು ಉಚಿತವಾಗಿ ನೀಡುವುದಲ್ಲದೆ ಪ್ರಾಯೋಜಕರ ಹೆಸರು/ ಸಂಸ್ಥೆಯ ಚಿಹ್ನೆಯನ್ನು ಮೇಳದ ಪ್ರಮುಖ ಸ್ಥಳಗಳಲ್ಲಿ ಹಾಗು ತೋಟಗಾರಿಕೆ ವಿಶೇಷ ಕೈಪಿಡಿ ಸಂಚಿಕೆಯಲ್ಲೂ ಪ್ರಕಟಿಸಲಾಗುವುದು.

**ಹಣ ಸಂದಾಯ:** ಪ್ರಾಯೋಜಕತ್ವಕ್ಕೆ, ಕೈಪಿಡಿಯ ಪ್ರಕಟಣೆಗೆ ಹಾಗೂ ವಸ್ತು ಪ್ರದರ್ಶನ ಮಳಿಗೆಗಳನ್ನು ಪಡೆಯಲಿಚ್ಛಿಸುವವರು ನಿಗದಿತ ವಿವರಗಳೊಂದಿಗೆ, ಡಿಮ್ಯಾಂಡ್ ಡ್ರಾಫ್ಟ್ ಅನ್ನು Society for Promotion of Horticulture, ICAR-IIHR, Hesaraghatta, Bengaluru ಇವರ ಹೆಸರಲ್ಲಿ ಪಡೆದು ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಬಹುದಾಗಿದೆ ಅಥವಾ ಹಣವನ್ನು ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ ಈ ಕೆಳಗಿನ ಖಾತೆಗೆ ವರ್ಗಾಯಿಸಬಹುದಾಗಿದೆ.

| | |
|---|---|
| ಫಲಾನುಭವಿಯ ಹೆಸರು | : Society for Promotion of Horticulture, ICAR-IIHR, Hesaraghatta, Bengaluru. |
| ಬ್ಯಾಂಕ್ ಖಾತೆ ನಂ. | : 1805606747 |
| ಎಂ.ಐ.ಸಿ.ಆರ್. ನಂ | : 560016044 |
| ಐ.ಎಫ್.ಎಸ್.ಸಿ. ಕೋಡ್ | : CBIN0283973 |
| ಬ್ಯಾಂಕ್ ವಿಳಾಸ | : Central Bank of India, IIHR, Hesaraghatta Lake Post, Bengaluru - 560089. |

## ತೋಟಗಾರಿಕಾ ಮೇಳ ನಡೆಯುವ ಸ್ಥಳ

ಐ.ಸಿ.ಎ.ಆರ್ – ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐ.ಐ.ಎಚ್.ಆರ್), ಹೆಸರಘಟ್ಟ, ಬೆಂಗಳೂರು. ತೋಟಗಾರಿಕಾ ಸಂಶೋಧನೆಗಾಗಿ ದೇಶದಲ್ಲಿಯೇ ಮುಂಚೂಣಿಯಲ್ಲಿರುವ ಈ ಸಂಸ್ಥೆಯು ಬೆಂಗಳೂರು ನಗರದಿಂದ 25 ಕಿಲೋ ಮೀಟರ್ ದೂರದಲ್ಲಿದೆ.

## ಸಂಘಟನಾ ಸಮಿತಿ

ಡಾ. ತ್ರಿಲೋಚನ ಮಹಾಪಾತ್ರ, ಮುಖ್ಯಪೋಷಕರು, ಕಾರ್ಯದರ್ಶಿ DARE ಮತ್ತು DG, ICAR ನವದೆಹಲಿ.
ಡಾ. ಎ.ಕೆ. ಸಿಂಗ್, ಪೋಷಕರು, ಉಪಮಹಾ ನಿರ್ದೇಶಕರು (ತೋಟಗಾರಿಕೆ), ಐ.ಸಿ.ಎ.ಆರ್, ನವದೆಹಲಿ.
ಡಾ. ಎಂ.ಆರ್.ದಿನೇಶ್, ಅಧ್ಯಕ್ಷರು, ರಾಷ್ಟ್ರೀಯ ತೋಟಗಾರಿಕಾ ಮೇಳ–2019, ನಿರ್ದೇಶಕರು, ಐ.ಸಿ.ಎ.ಆರ್–ಐ.ಐ.ಎಚ್.ಆರ್, ಬೆಂಗಳೂರು.
ಡಾ. ಅರಿಜ಼್ ಅಹಮಧ್, ವ್ಯವಸ್ಥಾಪಕಾ ನಿರ್ದೇಶಕರು, ರಾಷ್ಟ್ರೀಯ ತೋಟಗಾರಿಕಾ ಮಂಡಳ, ಗುರುಗ್ರಾಮ.
ಡಾ. ಬಿ.ಎನ್. ಶ್ರೀನಿವಾಸಮೂರ್ತಿ, ತೋಟಗಾರಿಕೆ ಆಯುಕ್ತರು, ಭಾರತ ಸರ್ಕಾರ, ನವದೆಹಲಿ.
ಡಾ. ವೈ.ಎಸ್. ಪಾಟೀಲ್, ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
ಡಾ. ಎ.ಟಿ. ಸದಾಶಿವ, ಸಂಘಟನಾ ಕಾರ್ಯದರ್ಶಿ, ಮುಖ್ಯಸ್ಥರು, ತರಕಾರಿ ಬೆಳೆಗಳ ವಿಭಾಗ, ಐ.ಸಿ.ಎ.ಆರ್–ಐ.ಐ.ಎಚ್.ಆರ್, ಬೆಂಗಳೂರು.
ಡಾ. ಟಿ. ಎಸ್. ಅಘೋರ, ಸದಸ್ಯ ಕಾರ್ಯದರ್ಶಿ, ಪ್ರಧಾನ ವಿಜ್ಞಾನಿ, ಐ.ಸಿ.ಎ.ಆರ್–ಐ.ಐ.ಎಚ್.ಆರ್, ಬೆಂಗಳೂರು.
ಡಾ. ಸಿ. ಅಶ್ವತ್ಥ್, ಪ್ರಧಾನ ವಿಜ್ಞಾನಿ, ಐ.ಸಿ.ಎ.ಆರ್–ಐ.ಐ.ಎಚ್.ಆರ್ ಮತ್ತು ಕಾರ್ಯದರ್ಶಿ SPH, ಬೆಂಗಳೂರು.
ಡಾ. ಎಂ. ವಿ. ಧನಂಜಯ, ಪ್ರಧಾನ ವಿಜ್ಞಾನಿ, ಐ.ಸಿ.ಎ.ಆರ್–ಐ.ಐ.ಎಚ್.ಆರ್, ಬೆಂಗಳೂರು.
ಡಾ. ಎಸ್. ಎಸ್. ಹೆಬ್ಬಾರ್, ಪ್ರಧಾನ ವಿಜ್ಞಾನಿ, ಐ.ಸಿ.ಎ.ಆರ್–ಐ.ಐ.ಎಚ್.ಆರ್, ಬೆಂಗಳೂರು.
ಡಾ. ಸಿ. ಕೆ. ನಾರಾಯಣ, ಪ್ರಧಾನ ವಿಜ್ಞಾನಿ, ಐ.ಸಿ.ಎ.ಆರ್–ಐ.ಐ.ಎಚ್.ಆರ್, ಬೆಂಗಳೂರು.
ಡಾ. ಆರ್. ವೆಂಕಟಕುಮಾರ್, ಮುಖ್ಯಸ್ಥರು, ಪ್ರಧಾನ ವಿಜ್ಞಾನಿ, ಐ.ಸಿ.ಎ.ಆರ್–ಐ.ಐ.ಎಚ್.ಆರ್, ಬೆಂಗಳೂರು.
ಡಾ. ಬಿ. ನಾರಾಯಣಸ್ವಾಮಿ, ಪ್ರಧಾನ ವಿಜ್ಞಾನಿ, ಐ.ಸಿ.ಎ.ಆರ್–ಐ.ಐ.ಎಚ್.ಆರ್, ಬೆಂಗಳೂರು.

**ಡಾ. ಎಂ.ಆರ್.ದಿನೇಶ್, ಅಧ್ಯಕ್ಷರು** ಸಂಘಟನಾ ಸಮಿತಿ, ರಾಷ್ಟ್ರೀಯ ತೋಟಗಾರಿಕಾ ಮೇಳ – 2019,
ನಿರ್ದೇಶಕರು, ಐ.ಸಿ.ಎ.ಆರ್ – ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐ.ಐ.ಎಚ್.ಆರ್),
ಹೆಸರಘಟ್ಟ ಕೆರೆ ಅಂಚೆ, ಬೆಂಗಳೂರು – 560089, ದೂರವಾಣಿ ಸಂಖ್ಯೆ : 080-28446100,
ವೆಬ್ ಸೈಟ್ : https://iihr.res.in

**ಇನ್ನೂ ಹೆಚ್ಚಿನ ಮಾಹಿತಿಗಾಗಿ ಹಾಗೂ ತೋಟಗಾರಿಕಾ ಮೇಳದಲ್ಲಿ ನೋಂದಾಯಿಸಲು ದಯವಿಟ್ಟು ಸಂಪರ್ಕಿಸಿ:**

**ಡಾ. ಎ.ಟಿ. ಸದಾಶಿವ, ಸಂಘಟನಾ ಕಾರ್ಯದರ್ಶಿ,**
ಮುಖ್ಯಸ್ಥರು, ತರಕಾರಿ ಬೆಳೆಗಳ ವಿಭಾಗ,
ಐ.ಸಿ.ಎ.ಆರ್ – ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐ.ಐ.ಎಚ್.ಆರ್),
ಹೆಸರಘಟ್ಟ ಕೆರೆ ಅಂಚೆ, ಬೆಂಗಳೂರು– 560089
ದೂರವಾಣಿ ಸಂಖ್ಯೆ: (M) 9845097472
ಇ–ಮೇಲ್: Sadashiva.AT@icar.gov.in

**ಡಾ. ಟಿ. ಎಸ್. ಅಘೋರ, ಸದಸ್ಯ ಕಾರ್ಯದರ್ಶಿ,**
ಪ್ರಧಾನ ವಿಜ್ಞಾನಿ, ತರಕಾರಿ ಬೆಳೆಗಳ ವಿಭಾಗ,
ಐ. ಸಿ. ಎ. ಆರ್ – ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ (ಐ.ಐ.ಎಚ್.ಆರ್),
ಹೆಸರಘಟ್ಟ ಕೆರೆ ಅಂಚೆ, ಬೆಂಗಳೂರು – 560089
ದೂರವಾಣಿ ಸಂಖ್ಯೆ: (M) 9986100079
ಇ–ಮೇಲ್: Aghora.TS@icar.gov.in